# ಕರ್ನಾಟಕ ಸರ್ಕಾರ

| | |
|---|---|
| ಇಲಾಖೆ<br>ಸಾರ್ವಜನಿಕ ಮಾಹಿತಿ ಪ್ರಾಧಿಕಾರ | ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)<br>ನಿರ್ದೇಶಕರ ಕಚೇರಿ,<br>ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ<br>ನಿರ್ದೇಶನಾಲಯ),18 ನೇ ಅಡ್ಡರಸ್ತೆ,<br>ಮಲ್ಲೇಶ್ವರಂ,ಬೆಂಗಳೂರು-560012 |
| ದೂರವಾಣಿ ಸಂಖ್ಯೆ | (080) 23562033 |
| ಇ-ಮೇಲ್ | commissioner.pue@gmail.com<br>psdirector.pue@karnataka.gov.in |

ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ - 2005

ಅಧ್ಯಾಯ – II ನಿಯಮ – 4 (i) ಬಿ ಕೈಪಿಡಿ

ಇಲಾಖಾ ಜಾಲತಾಣ (ವೆಬ್ ಸೈಟ್) : www.pue.karnataka.gov.in

**4 (i) ಬಿ (i) ಇಲಾಖೆಯ ವಿವರ, ರಚನಾಸೂಚಿ, ಕಾರ್ಯಗಳು ಹಾಗೂ ಕರ್ತವ್ಯಗಳು :**

**ಇಲಾಖೆಯ ವಿವರಗಳು:**

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇಲಾಖೆಯು ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ (ಹನ್ನೊಂದು ಮತ್ತು ಹನ್ನೆರಡನೆಯ ತರಗತಿಗಳಿಗೆ) ಗುಣಾತ್ಮಕ ಶಿಕ್ಷಣವನ್ನು ಕೊಡುವ ಜವಾಬ್ದಾರಿಯನ್ನು ಹೊಂದಿದೆ. ಕರ್ನಾಟಕ ರಾಜ್ಯದಲ್ಲಿರುವ ಪದವಿ ಪೂರ್ವ ಶಿಕ್ಷಣವನ್ನು ಬೋಧಿಸುವ ಎಲ್ಲಾ ಪದವಿ ಪೂರ್ವ ಕಾಲೇಜುಗಳು ಈ ಇಲಾಖೆಯ ಅಧೀನದಲ್ಲಿ ಬರುತ್ತವೆ.

ರಾಜ್ಯ ಮಟ್ಟದಲ್ಲಿ ಇಲಾಖೆಯ ಕೇಂದ್ರ ಕಛೇರಿಯು ಮಲ್ಲೇಶ್ವರಂ 18ನೇ ಅಡ್ಡರಸ್ತೆ, ಬೆಂಗಳೂರಿನಲ್ಲಿದ್ದು, ನಿರ್ದೇಶಕರು/ಆಯುಕ್ತರು ಕೇಂದ್ರ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಕೇಂದ್ರ ಕಛೇರಿಯಲ್ಲಿ ಆಡಳಿತ, ಶೈಕ್ಷಣಿಕ, ಮೂಲಭೂತ ಸೌಲಭ್ಯ, ಮಾನ್ಯತೆ ಮತ್ತು ಅನುದಾನ ಹಾಗೂ ಲೆಕ್ಕಪತ್ರ ಶಾಖೆಗಳು ಕಾರ್ಯನಿರ್ವಹಿಸುತ್ತಿವೆ.

ಜಿಲ್ಲಾ ಮಟ್ಟದಲ್ಲಿ 32 ಜಿಲ್ಲಾ ಉಪನಿರ್ದೇಶಕರ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಉಪನಿರ್ದೇಶಕರು ಕಛೇರಿಯ ಮುಖ್ಯಸ್ಥರಾಗಿರುತ್ತಾರೆ.

ಈ ಕೆಳಗಿನ ವಿಧದ ಪದವಿ ಪೂರ್ವ ಕಾಲೇಜುಗಳು ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಟ್ಟಿವೆ:

(1) ಸರ್ಕಾರಿ ಪದವಿ ಪೂರ್ವ ಕಾಲೇಜುಗಳು

(2) ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು

(3) ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳು

(4) ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳು

(5) ನಗರ ಪಾಲಿಕೆ ಪದವಿ ಪೂರ್ವ ಕಾಲೇಜುಗಳು.

(6) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪದವಿ ಪೂರ್ವ ಕಾಲೇಜುಗಳು.

(7) ಕರ್ನಾಟಕ ಪಬ್ಲಿಕ್ ಶಾಲೆಗಳು (ಪದವಿ ಪೂರ್ವ)

**<u>ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಾಲೇಜುಗಳ ಅಂಕಿಅಂಶಗಳು ಈ ಕೆಳಕಂಡಂತಿವೆ.</u>**

| | |
|---|---|
| ಸರ್ಕಾರಿ ಪದವಿ ಪೂರ್ವ ಕಾಲೇಜುಗಳು(276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನೂ | 1234 |

| | |
|---|---|
| ಒಳಗೊಂಡಂತೆ ) | |
| ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು | 823 |
| ಖಾಸಗಿ ಅನುದಾನಿತ ರಹಿತ ಪದವಿ ಪೂರ್ವ ಕಾಲೇಜುಗಳು | 3566 |
| ವಿಭಜಿತ ಪದವಿ ಪೂರ್ವ ಕಾಲೇಜುಗಳು | 160 |
| ನಗರ ಪಾಲಿಕೆ ಪದವಿ ಪೂರ್ವ ಕಾಲೇಜುಗಳು | 18 |
| ಕೆ ಆರ್ ಐ ಇ ಎಸ್ | 84 |
| ಒಟ್ಟು | **5885** |


ಇಲಾಖೆ ಮುಖ್ಯಸ್ಥರು — ನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ
ನಿರ್ದೇಶನಾಲಯ),18 ನೇ ಅಡ್ಡರಸ್ತೆ,
ಮಲ್ಲೇಶ್ವರಂ,ಬೆಂಗಳೂರು-560012

ದೂರವಾಣಿ ಸಂಖ್ಯೆ — (080) 23562033
ಇ-ಮೇಲ್ — commissioner.pue@gmail.com
psdirector.pue@karnataka.gov.in


## 4 (i) ಬಿ (i) ಕಾರ್ಯಗಳು

**ಶೈಕ್ಷಣಿಕ:**

- ಪಠ್ಯಕ್ರಮ ರಚನೆ ಸಂಬಂಧ – ಚಾಲನಾ ಸಮಿತಿ ರಚನೆ.
- ಪಠ್ಯಕ್ರಮ ಪರಿಷ್ಕರಿಸಲು ಮತ್ತು ಈ ಕಾರ್ಯಕ್ಕೆ ಆಯವ್ಯಯ ನಿಗದಿಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
- ಪರಿಷ್ಕೃತ ಪಠ್ಯಕ್ರಮದ ಆಧಾರದ ಮೇಲೆ ಭಾಷಾ ವಿಷಯಗಳಲ್ಲಿ ಪಠ್ಯ ಪುಸ್ತಕ ಸಮಿತಿಯು ರಚನೆ.
- ಪರಿಷ್ಕರಿಸಿದ ಪಠ್ಯಕ್ರಮದ ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾವನೆ.
- ಸರ್ಕಾರ ಅನುಮೋದಿಸಿದ ಪಠ್ಯ ಪುಸ್ತಕದ ಮುದ್ರಣಕ್ಕಾಗಿ ಕೆ.ಟಿ.ಪಿ.ಎಸ್ ಗೆ ಕಳುಹಿಸುವುದು.
- ಪಠ್ಯಕ್ರಮದ ಆಧಾರದ ಮೇಲೆ – ಪ್ರಾಂಶುಪಾಲರಿಗೆ/ಉಪನ್ಯಾಸಕರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಡಿ.ಎಸ್.ಇ.ಆರ್.ಟಿ ಮುಖಾಂತರ ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಪ್ರಶಿಕ್ಷಣ ಶಿಬಿರಗಳ ಏರ್ಪಾಡು.
- ಪಠ್ಯಕ್ರಮಕ್ಕೆ ಅನುಗುಣವಾಗಿ ನಿಗಧಿಪಡಿಸಿದ ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಮಾರ್ಗಸೂಚಿ ಸಿದ್ಧಪಡಿಸುವುದು.
- ವಿದ್ಯಾರ್ಥಿಗಳ ದಾಖಲಾತಿ ಅನುಮೋದಿಸಿ ಮತ್ತು ಪ್ರತಿ ವಿದ್ಯಾರ್ಥಿಗೆ ಪ್ರತ್ಯೇಕ ವಿದ್ಯಾರ್ಥಿ ಸಂಖ್ಯೆಯನ್ನು ಇ-ಆಡಳಿತದ ಮೂಲಕ (SATS) ನೀಡುವುದು.